# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್.ಸಿ ನ್ಯಾಯಾಲಯ ಹಿರೇಕೆರೂರು

**ಸಿ ಸಿ ನಂ: 280/2019**

ಸಿ .ಡಬ್ಲ್ಯೂ-12
ಪಿ .ಡಬ್ಲ್ಯೂ-10

| | | |
|---|---|---|
| ಹೆಸರು | : | ಕೆಂಚನಗೌಡ |
| ತಂದೆ ಹೆಸರು | : | ಹನುಮಗೌಡ ಕೆಂಚನಗೌಡ್ರ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಗಂಗಾಪುರ |

ಇಂದು ದಿಃ **08-11-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ಸಾಕ್ಷಿ ಕಳ್ಳತನ ಮಾಡಿದ ಜಾಗೆಯ ಪಂಚನಾಮೆಯಲ್ಲಿ ತಾನು ಸಹಿ ಮಾಡಿರುವುದಾಗಿ ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. 2 ವರ್ಷದ ಹಿಂದೆ ಗಂಗಾಪುರದಲ್ಲಿ ಕೋಡಿ ಕೆಂಚಮ್ಮ ದೇವಸ್ಥಾನದ ಹತ್ತಿರ ನಿಪಿ-3 ಕ್ಕೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಗ್ರಾಮಸ್ಥರು ಹಾಗೂ ಪೋಲಿಸರು ಇದ್ದರು. ಅವರನ್ನು ಬಿಟ್ಟು ಬೇರೆ ಯಾರು ಇದ್ದರು ಎಂದು ಮಾಹಿತಿ ಇರುವುದಿಲ್ಲ. ನಿಪಿ-3 ರಲ್ಲಿ ಏನು ಬರೆದಿರುತ್ತದೆ ಎಂದು ಮಾಹಿತಿ ಇರುವುದಿಲ್ಲ. ಪೋಲಿಸರು ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರು ಪಾಟೀ ಸವಾಲಿಗೆ ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಕೋರಿಕೆಯನ್ನು ಮನ್ನಿಸಲಾಯಿತು.)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 17-08-2018 ರಂದು ಪೋಲಿಸರು 3 ಜನ ಆರೋಪಿಗಳನ್ನು ಕರೆದುಕೊಂಡು ಬಂದಿದ್ದರು ಅವರು ಚಿಕ್ಕಮತ್ತೂರು, ಗಂಗಾಪುರ, ಮಾವಿನತೋಪ ದೇವಸ್ಥಾನಗಳಲ್ಲಿ ಕಳ್ಳತನ ಮಾಡಿದ್ದು, ಅವರು ಜಾಗಾ ತೋರಿಸುತ್ತಾರೆ, ಪಂಚರಾಗಿ ಬನ್ನಿ ಎಂದು ಪೋಲಿಸರು ನಮಗೆ ಹೇಳಿರುತ್ತಾರೆ ಎನ್ನುವುದು ನಿಜ. ಪೋಲಿಸ ವಾಹನದಲ್ಲಿ ನಮ್ಮ ಊರಿನಿಂದ ಚಿಕ್ಕಮತ್ತೂರು ಗ್ರಾಮಕ್ಕೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಗ್ರಾಮದಲ್ಲಿ ಆರೋಪಿಗಳು ಮಾಸ್ತಮ್ಮನ ಕಟ್ಟೆಯ ಹತ್ತಿರ ಕಾಣಿಕೆಯ ಪೆಟ್ಟಿಗೆಯನ್ನು ತೋರಿಸಿ ಅದನ್ನು ಕಳ್ಳತನ ಮಾಡಿರುತ್ತೇವೆ ಎಂದು ಹೇಳಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ನಂತರ ಅಲ್ಲಿಂದ ನಡೆದುಕೊಂಡು ಚಿಕ್ಕಮತ್ತೂರು ಗ್ರಾಮದ ಆಂಜನೇಯ ದೇವಸ್ಥಾನಕ್ಕೆ ಹೋಗಿರುತ್ತೇವೆ ಎಂದರೆ ಸರಿಯಲ್ಲ ಅಲ್ಲಿ ಆರೋಪಿಗಳು ಸದರಿ ದೇವಸ್ಥಾನದ ಕಾಣಿಕೆ ಹುಂಡಿಯನ್ನು ಕಳ್ಳತನ ಮಾಡಿರುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿಂದ ಗಂಗಾಪುರ ಗ್ರಾಮಕ್ಕೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಗ್ರಾಮದ ಕೋಡಿ ಕೆಂಚಮ್ಮ ದೇವಸ್ಥಾನದಲ್ಲಿ ಕಾಣಿಕೆ ಹುಂಡಿಯನ್ನು ಹಾರಿಯಿಂದ

ಸಿ .ಡಬ್ಲ್ಯೂ-12
ಪಿ .ಡಬ್ಲ್ಯೂ-10

ಮೀಟಿ ಕಳ್ಳತನ ಮಾಡಿರುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅಂಜನೇಯ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದೇವಸ್ಥಾನದ ಕಾಣಿಕೆ ಹುಂಡಿಯನ್ನು ಒಡೆದಿರುತ್ತೇವೆ ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅಲ್ಲಿಂದ ಹುಲ್ಲತ್ತಿ ಗ್ರಾಮದ ಮುಖಾಂತರ ಮಾವಿನತೋಪು ಗ್ರಾಮಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. 3 ಜನ ಆರೋಪಿಗಳು ಕಳ್ಳತನ ಮಾಡಲು ಉಪಯೋಗಿಸಿದ ವಸ್ತುಗಳನ್ನು ಶಿರಾಳಕೊಪ್ಪ ಪೋಲಿಸರಿಗೆ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. 8-00 ರಿಂದ 11-30 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ ಅದಕ್ಕೆ 3 ಜನ ಆರೋಪಿಗಳು, ನಾನು, ಚಾಸಾ-11 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳನ್ನು ಆ ದಿನ ಪೋಲಿಸರು ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಯು. ಬಿ. ಜೆ. ವಕೀಲರಿಂದಃ

ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ. ಪೋಸರು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ ಎನ್ನುವುದು ನಿಜ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 08-11-2022.

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು